**Email** **Dean Agri. GKVK**

## Krishi Sanjeevini - Recruitment of Agriculture Graduates

**From :** deuasbangalore@gmail.com — Wed, Feb 08, 2023 04:38 PM

**Subject :** Krishi Sanjeevini - Recruitment of Agriculture Graduates — 1 attachment

**To :** dsw BANGALORE <dsw@uasbangalore.edu.in>, dswuasbengaluru@gmail.com, doe BANGALORE <doe@uasbangalore.edu.in>, registrar BANGALORE <registrar@uasbangalore.edu.in>, Dean Agri. GKVK <deanagben@uasbangalore.edu.in>, deanmandya@gmail.com, Dean Sericulture <deanseri@uasbangalore.edu.in>, deanach923@gmail.com, Dean PGS <deanpgs@uasbangalore.edu.in>, Dean Agri. <deanaghas@uasbangalore.edu.in>, Dr. M. Papegowda <librarian@uasbangalore.edu.in>

8343
8/2/23

Sir,

Please find the attachment and request to give wide publicity.

Regards,

***Director of Extension***
University of Agricultural Sciences
GKVK, Bengaluru-560065
Mobile: 9449866904

---

**Krishi Sanjeevini.pdf**
1 MB

---

To, 1) All professor and Head, CoA, GKVK to circulate among faculty
2) CR Whatt's App groups.

8.2.2023
Dean (Agri.)
College of Agriculture
UAS, GKVK, Bangalore-560 065

ಕರ್ನಾಟಕ ಸರ್ಕಾರ
ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | Department of Skill Development, Entrepreneurship and Livelihood
No 4, 2nd& 3rd floor, My Sugar Building, JC road, Opp to Ravindra Kala Kshetra, Bangalore –560002
Ph No: 080-23564271, e-mail: nrlmkarnataka@gmail.com

ಸಂಖ್ಯೆ:KSRLPS/HR/117/2018-19/Vol-III/2021-22 ದಿನಾಂಕ:03/02/2023

ಇವರಿಗೆ,
ಕುಲಪತಿಗಳು,
ಕೃಷಿ ವಿಶ್ವ ವಿದ್ಯಾನಿಲಯ,
ಜಿಕೆವಿಕೆ, ಬೆಂಗಳೂರು.

ಮಾನ್ಯರೆ,

ವಿಷಯ : ಕೃಷಿ ಮತ್ತು ಕೃಷಿ ಸಂಬಂಧಿತ ವಿಜ್ಞಾನಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅಭ್ಯರ್ಥಿಗಳನ್ನು ಕೃಷಿ ಜೀವನೋಪಾಯ ಯುವ ವೃತ್ತಿಪರರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಹಿಳೆಯರ **"ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ"** ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕೇಂದ್ರ ಪುರಸ್ಕೃತ **"ದೀನ್ ದಯಾಳ್ ಅಂತ್ಯೋದಯ ಯೋಜನೆ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ"** (ಡೇ-ಎನ್‌ಆರ್‌ಎಲ್‌ಎಂ) ಕಾರ್ಯಕ್ರಮಗಳನ್ನು ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಯಡಿ ಸ್ಥಾಪಿಸಿರುವ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ರಾಜ್ಯಾದ್ಯಾಂತ ಅನುಷ್ಠಾನಗೊಳಿಸಲಾಗುತ್ತಿದೆ.

2011-12ನೇ ಸಾಲಿನಿಂದ ಇದುವರೆಗೆ **5750**ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸಿ **250000**ಕ್ಕೂ ಹೆಚ್ಚಿನ ಮಹಿಳಾ ಸ್ವ-ಸಹಾಯ ಗುಂಪುಗಳ ಮೂಲಕ **29,46,000** ಕ್ಕೂ ಹೆಚ್ಚಿನ ದುರ್ಬಲ ವರ್ಗದ ಕುಟುಂಬಗಳ ಮಹಿಳೆಯರನ್ನು ಅಭಿಯಾನದ ವ್ಯಾಪ್ತಿಗೆ ತರಲಾಗಿದ್ದು, ಅಗತ್ಯ ತರಬೇತಿ ನೀಡುವುದರ ಮೂಲಕ ಅವರುಗಳ ಸಾಮರ್ಥ್ಯ ಬಲವರ್ಧನೆಗೊಳಿಸಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ಸದಸ್ಯರುಗಳಿಗೆ ವಿವಿಧ ತರಬೇತಿ ಆಯೋಜಿಸಲು ಮತ್ತು ಅಗತ್ಯ ಬೆಂಬಲ ಒದಗಿಸಲು ಸುಮಾರು 25000 ಕ್ಕೂ ಹೆಚ್ಚು ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು (ಎಂಬಿಕೆ ಮತ್ತು ಎಲ್‌ಸಿಆರ್‌ಪಿ, ಕೃಷಿ ಸಖಿ, ಪಶು ಸಖಿ, ಕೃಷಿ ಉದ್ಯೋಗ ಸಖಿ, ವನ ಸಖಿ, ಮಧು ಸಖಿ, ಮತ್ಸ್ಯ ಸಖಿ, ಬ್ಯಾಂಕ್ ಸಖಿ ಇತ್ಯಾದಿ) ಆಯ್ಕೆ ಮಾಡಿ ಅಗತ್ಯ ತರಬೇತಿಗಳನ್ನು ವಿವಿಧ ತರಬೇತಿ ಸಂಸ್ಥೆಗಳ ಮೂಲಕ ನೀಡಿ ಅವರ ತಾಂತ್ರಿಕ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಒಕ್ಕೂಟಗಳ ಸದಸ್ಯರುಗಳು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಕೈಗೊಳ್ಳಲು ಅನುಕೂಲವಾಗುವಂತೆ ಇದುವರೆವಿಗೂ **ರೂ.1000.04** ಕೋಟಿಗಳ ಸಮುದಾಯ ಬಂಡವಾಳ ನಿಧಿ ಮತ್ತು ಸುತ್ತು ನಿಧಿ ಬಿಡುಗಡೆ ಮಾಡಿರುವ ಜೊತೆಗೆ ವಿವಿಧ ಬ್ಯಾಂಕ್‌ಗಳ ಮೂಲಕ ವಾರ್ಷಿಕ **ರೂ.12,000** ಕೋಟಿಗೂ ಹೆಚ್ಚಿನ ಬ್ಯಾಂಕ್ ಲಿಂಕೇಜ್ ಮಾಡಿಸುವ ಗುರಿ ಹೊಂದಲಾಗಿದೆ.

ಕೃಷಿ, ತೋಟಗಾರಿಕೆ, ರೇಷ್ಮೆ, ಹೈನುಗಾರಿಕೆ, ಕುರಿ ಮೇಕೆ, ಕೋಳಿ, ಹಂದಿ ಸಾಕಾಣಿಕೆ, ಮೀನುಗಾರಿಕೆ, ಕಿರು ಅರಣ್ಯ ಉತ್ಪನ್ನಗಳು, ಹಾಗೂ ಇತ್ಯಾದಿ ವಿಷಯಾಧಾರಿತ ತಾಂತ್ರಿಕ ತರಬೇತಿಗಳ ಮೂಲಕ ಅಭಿಯಾನ ಸಿಬ್ಬಂದಿಗಳ ಮತ್ತು ಸಮುದಾಯ ಸಂಪನ್ಮೂಲ ವ್ಯಕ್ತಿಗಳ (ಕೃಷಿ ಸಖಿ, ಪಶು ಸಖಿ, ಕೃಷಿ ಉದ್ಯೋಗ ಸಖಿ, ಮತ್ಸ್ಯ ಸಖಿ, ವನ ಸಖಿ) ಸಾಮರ್ಥ್ಯ ಬಲವರ್ಧನೆಗೊಳಿಸಿ ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪಿನ ಸದಸ್ಯ ರೈತ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ ಹಾಗೂ ಕೃಷಿ ಜೀವನೋಪಾಯ ಚಟುವಟಿಕೆಗಳ ವೈಜ್ಞಾನಿಕ ಮತ್ತು ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಂಡು ಅಧಿಕ ಲಾಭ ಗಳಿಸುವಂತೆ ಮಾಡುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ.

* Most Urgent *
7/2 P.S. pl. Circulate DSW/Deans (All Campus)/HoDs/Library/Canteen/Hostels

ರಾಜ್ಯದ ವಿವಿಧ ಕೃಷಿ ಮತ್ತು ಕೃಷಿ ಸಂಬಂಧಿತ ವಿಜ್ಞಾನಗಳ ವಿಶ್ವ ವಿದ್ಯಾನಿಲಯಗಳೂ ಸಹ ಇದೇ ತತ್ವದಡಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮತ್ತು ಕೃಷಿ ವಿಶ್ವ ವಿದ್ಯಾನಿಲಯಗಳು ಒಗ್ಗೂಡುವ ಮೂಲಕ ಕರ್ತವ್ಯ ನಿರ್ವಹಿಸುವುದು ಈ ಹಂತದಲ್ಲಿ ಅತ್ಯವಶ್ಯಕವಾಗಿದೆ. ಇದರಿಂದ ಸಣ್ಣ ಮತ್ತು ಅತೀ ಸಣ್ಣ ರೈತರು ಹಾಗೂ ದುರ್ಬಲ ವರ್ಗಗಳ ಕುಟುಂಬಗಳನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಉನ್ನತೀಕರಿಸಬಹುದಾಗಿದೆ. ಈ ಹಿನ್ನಲೆಯಲ್ಲಿ ಕೃಷಿ ಜೀವನೋಪಾಯ ವಿಭಾಗದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ವಿವಿಧ ಚಟುವಟಿಕೆ/ಕಾರ್ಯಕ್ರಮಗಳನ್ನು ಗುಣಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ವೃತ್ತಿಪರರ ಅವಶ್ಯಕತೆ ಇರುತ್ತದೆ.

ಆದುದರಿಂದ, ಕೃಷಿ ಮತ್ತು ಕೃಷಿ ಸಂಬಂಧಿತ ವಿಜ್ಞಾನಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅರ್ಹ ವೃತ್ತಿಪರರನ್ನು ಅನುಬಂಧ-1 ರಲ್ಲಿ ಪ್ರಸ್ತಾಪಿಸಿರುವ ಅರ್ಹತೆ ಮತ್ತು ಮಾನದಂಡಗಳ ಮಾರ್ಗಸೂಚಿಯಂತೆ ನಿಯಮಾನುಸಾರ ಆಯ್ಕೆ ಮಾಡಿ ಪ್ರತಿ ತಾಲ್ಲೂಕಿಗೆ ಒಬ್ಬರಂತೆ ನಿಯೋಜಿಸಲು ತೀರ್ಮಾನಿಸಲಾಗಿದೆ. ಆದುದರಿಂದ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಯುವ ವೃತ್ತಿಪರರನ್ನು ಆಯ್ಕೆ ಮಾಡಲು ಪ್ರಸ್ತಾಪಿಸಿದೆ. ನಿಯಮಾನುಸಾರ ಆಯ್ಕೆಗೊಂಡ ಯುವವೃತ್ತಿಪರರಿಗೆ ಮೊದಲ ಮೂರು ತಿಂಗಳುಗಳ ಅವಧಿಗೆ ಪ್ರತಿ ತಿಂಗಳು ರೂ. 30000.00 ಗಳ ವೇತನ ನೀಡಲಾಗುವುದು. ನಂತರ ಅವರುಗಳ ಕಾರ್ಯಕ್ಷಮತೆ, ಆಸಕ್ತಿ ಮತ್ತು ನಡತೆ ಆಧಾರದ ಮೇಲೆ ಪ್ರತಿ ತಿಂಗಳು ರೂ. 35000.00 ಗಳ ವೇತನ ನೀಡಲಾಗುವುದು.

2023-24ನೇ ಸಾಲಿನ ಮುಂಗಾರು ಹಂಗಾಮು ಪ್ರಾರಂಭವಾಗುವ ಮುನ್ನ ಯುವ ವೃತ್ತಿಪರರನ್ನು ಆಯ್ಕೆ ಮಾಡಿ ಅಗತ್ಯ ತರಬೇತಿ ನೀಡಿ ನಿಯೋಜಿಸುವುದರ ಮೂಲಕ ಮಹಿಳಾ ರೈತರಿಗೆ, ಕೃಷಿ ಸಖಿ, ಪಶು ಸಖಿ ಮತ್ತು ಕೃಷಿ ಉದ್ಯೋಗ ಸಖಿಯರಿಗೆ ಅಗತ್ಯ ತಾಂತ್ರಿಕ ಬೆಂಬಲ ಮತ್ತು ವಿಸ್ತರಣಾ ಸೇವೆಗಳನ್ನು ವಿಸ್ತರಿಸುವ ಉದ್ದೇಶದೊಂದಿಗೆ ತಮ್ಮ ವಿಶ್ವ ವಿದ್ಯಾನಿಲಯದ ವತಿಯಿಂದ ಕೃಷಿ ಜೀವನೋಪಾಯ ಯುವ ವೃತ್ತಿಪರರ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಕೈಗೊಂಡು ದಿನಾಂಕ:25-02-2023 ರ ಒಳಗೆ ಸಂಪೂರ್ಣ ನೇಮಕಾತಿ ಪ್ರಕ್ರಿಯೆ ಮುಕ್ತಾಯ ಮಾಡುವ ಸಂಬಂಧ ತಮ್ಮ ಸಹಮತ ಮತ್ತು ಅವಶ್ಯಕ ಬೆಂಬಲವನ್ನು ನೀರಿಕ್ಷಿಸಲಾಗಿದೆ.

ಕೃಷಿ ಜೀವನೋಪಾಯ ಯುವ ವೃತಿಪರರ ತ್ವರಿತಗತಿಯ ನೇಮಕಾತಿ ಪ್ರಕ್ರಿಯೆಗೆ ಈ ಕೆಳಕಂಡ ಸೂಚಕ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬಹುದಾಗಿದೆ.

1. ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ ಬೆಂಗಳೂರು ವ್ಯಾಪ್ತಿಗೆ ಒಳಪಡುವ ಎಲ್ಲಾ ಮಹಾ ವಿದ್ಯಾಲಯಗಳಿಗೆ (ಕಾಲೇಜು) ಯುವ ವೃತ್ತಿಪರರ ನೇಮಕಾತಿ ಕುರಿತು ಮಾಹಿತಿ ನೀಡುವುದು ಮತ್ತು ವ್ಯಾಪಕ ಪ್ರಚಾರ ಕೈಗೊಳ್ಳುವುದು.
2. ಸ್ನಾತಕೋತ್ತರ ಪದವಿ ಪಡೆದು 2 ವರ್ಷಗಳಾಗಿರುವ ಮತ್ತು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹರಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಂತೆ ಪ್ರೇರೇಪಿಸುವುದು.
3. ಕನಿಷ್ಠ 2 ವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಸಿದ್ದರಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿ ಸಿದ್ಧಪಡಿಸಿ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ರವರ ಕಛೇರಿಗೆ ಸಲ್ಲಿಸುವುದು.
4. ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ವತಿಯಿಂದ ಆಯೋಜಿಸುವ ಸಂದರ್ಶನ ಪ್ರಕ್ರಿಯೆಯಲ್ಲಿ ಅರ್ಹ ಅಭ್ಯರ್ಥಿಗಳು ಭಾಗವಹಿಸಲು ಅನುಕೂಲವಾಗುವಂತೆ ಅಗತ್ಯ ವ್ಯವಸ್ಥೆ ಮಾಡುವುದು.

5. ಯುವ ವೃತಿಪರ ಸಂಪೂರ್ಣ ನೇಮಕಾತಿ ಪ್ರಕ್ರಿಯೆಯ ಜವಾಬ್ದಾರಿ ನೀಡಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ನೊಂದಿಗೆ ಅಗತ್ಯ ಸಮನ್ವಯ ಸಾಧಿಸಲು ಏಕ ಸಂಪರ್ಕ ವ್ಯಕ್ತಿ/ಅಧಿಕಾರಿಯನ್ನು ನಾಮ ನಿರ್ದೇಶನ ಮಾಡುವುದು.

ಮೇಲೆ ಪ್ರಸ್ತಾಪಿಸಿರುವ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತುತ ಹಮ್ಮಿಕೊಂಡಿರುವ ಯುವ ವೃತ್ತಿಪರರ ನೇಮಕಾತಿ ಪ್ರಕ್ರಿಯೆಗೆ ತಾವು ಸಹಮತಿಸಿದ್ದಲ್ಲಿ ತಮ್ಮ ವಿಶ್ವ ವಿದ್ಯಾನಿಲಯದಿಂದ ಸಮನ್ವಯತೆಗಾಗಿ ಏಕ ಸಂಪರ್ಕ ವ್ಯಕ್ತಿಯನ್ನು ನೇಮಿಸಿ ವಿವರವನ್ನು ಈ ಕಛೇರಿಗೆ ನೀಡಿ ಸಂಪೂರ್ಣ ಸಹಕಾರ ವಿಸ್ತರಿಸಿ ಸದರಿ ಪ್ರಕ್ರಿಯೆಯಲ್ಲಿ ಪಾಲುದಾರರಾಗಿ ತಮ್ಮ ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ದೊರಕಿಸಿ ಕೊಡುವಂತೆ ಕೋರಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

02/02/23

(ಡಾ.ರಾಗಪ್ರಿಯಾ, ಆರ್. ಭಾಆಸೇ.,)
**ಅಭಿಯಾನ ನಿರ್ದೇಶಕರು,**
ರಾಷ್ಟ್ರೀಯ ಜೀವನೋಪಾಯ ಅಭಿಯಾನ,

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು, ಇವರ ಆಪ್ತ ಶಾಖೆಗೆ, ಮಾಹಿತಿಗಾಗಿ ಸಲ್ಲಿಸಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು, ಇವರ ಆಪ್ತ ಶಾಖೆಗೆ, ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು, ಇವರ ಆಪ್ತ ಶಾಖೆಗೆ, ಮಾಹಿತಿಗಾಗಿ ಸಲ್ಲಿಸಿದೆ.
4. ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು.
5. ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
6. ಮಾನವ ಸಂಪನ್ಮೂಲ ಮತ್ತು ಆಡಳಿತ ಶಾಖೆ, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಅಗತ್ಯ ಕ್ರಮಕ್ಕಾಗಿ.
7. ಡಾ. ವೆಂಕಟೇಶ್, ಜಿ ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಕೃಷಿ ಜೀವನೋಪಾಯ), ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಅಗತ್ಯ ಸಮನ್ವಯತೆ ಸಾಧಿಸುವುದು.
8. ಕಛೇರಿ ಪ್ರತಿ.

ಅನುಬಂಧ-1

1) ಅರ್ಹತೆಗಳು:

**1.1** ಕೃಷಿ ಮತ್ತು ಕೃಷಿ ಸಂಬಂಧಿತ ವಿಜ್ಞಾನಗಳಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣ ಅರ್ಹತೆ.

**1.2** ಕೃಷಿ ಮತ್ತು ತೋಟಗಾರಿಕೆ ಸಂಬಂಧಿತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಅನುಭವ ಹೊಂದಿರುವ ಅಭ್ಯರ್ಥಿಗಳು ಸಹ ಅರ್ಹರಿರುತ್ತಾರೆ.

**1.3** ಅಭ್ಯರ್ಥಿಗಳು 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.

**2) ಆಯ್ಕೆಯ ಸಮಯದಲ್ಲಿ ಯುವ ವೃತ್ತಿಪರರಿಂದ ಈ ಕೆಳಗಿನ ಗುಣ ಲಕ್ಷಣಗಳ ಸಂಯೋಜನೆಯು ಅಪೇಕ್ಷಣೀಯವಾಗಿದೆ.**

2.1. ಅಭ್ಯರ್ಥಿಯು ಗ್ರಾಮೀಣ ಬಡವರೊಂದಿಗೆ ಕೆಲಸ ಮಾಡುವ ಉತ್ಸಾಹವನ್ನು ಹೊಂದಿರಬೇಕು

2.2. ಅಭ್ಯರ್ಥಿಯು ತಳಮಟ್ಟದ ಕಾರ್ಯಯೋಜನೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಗ್ರಾಮೀಣ ಬಡ ಸಮುದಾಯಗಳೊಂದಿಗೆ ಉಳಿಯಲು ಬದ್ಧತೆಯನ್ನು ಹೊಂದಿರಬೇಕು.

2.3. ಅವನು/ಅವಳು ತಂಡಗಳಲ್ಲಿ/ತಂಡಗಳೊಂದಿಗೆ ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು.

2.4. ಇಂಗ್ಲೀಷ್‌ನಲ್ಲಿ ಪ್ರಾವಿಣ್ಯತೆ ಹೊಂದಿರಬೇಕು.

2.5. ಕನ್ನಡದಲ್ಲಿ ಬರೆಯಲು ಮತ್ತು ಮಾತನಾಡುವುದು ಕಡ್ಡಾಯ.

**3) ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಯುವ ವೃತ್ತಿಪರರಿಗೆ ಗೂಗಲ್ ಫಾರಂ ಅನ್ನು ಅಭಿವೃದ್ಧಿ ಪಡಿಸಲಾಗಿದೆ. ಗೂಗಲ್ ಫಾರಂ 03 ಭಾಗಗಳನ್ನು ಹೊಂದಿದೆ.**

**3.1** ಉದ್ದೇಶದ ಹೇಳಿಕೆ – ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್‌ಗೆ ಸೇರಲು ಕಾರಣ.

**3.2** ಒಂದು ಸಣ್ಣ ಪ್ರಬಂಧ (300 ಪದಗಳು) – ನಿರ್ದಿಷ್ಟವಾಗಿ ಕೃಷಿ ಜೀವನೋಪಾಯದಲ್ಲಿ ಗ್ರಾಮೀಣ ಜೀವನೋಪಾಯವನ್ನು ಸುಧಾರಿಸಲು ನೀವು ಯಾವ ಹಸ್ತಕ್ಷೇಪವನ್ನು (Interventions) ಪ್ರಾರಂಭಿಸಲು ಪ್ರಸ್ತಾಪಿಸುತ್ತೀರಿ.

**3.3** Google form link :
https://docs.google.com/forms/d/e/1FAIpQLSeHWth0oV-pgEfgiklFZq5soqTU-yVwrVB5qLCW_yAc_OJeOg/viewform?usp=pp_url

**3.4** ಅಭ್ಯರ್ಥಿಯ Updated CV ಸಲ್ಲಿಸುವುದು.

ಅಪೇಕ್ಷಿತ ಅರ್ಜಿದಾರರು 15ನೇ ಫೆಬ್ರವರಿ 2023 ರೊಳಗೆ ಒದಗಿಸಿದ ಗೂಗಲ್ ಫಾರ್ಮ್ ಅನ್ನು ಭರ್ತಿ ಮಾಡಲು ವಿನಂತಿಸಲಾಗಿದೆ.